**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಕೊಡಗು-ಮಡಿಕೇರಿ**
**ಎಸ್.ಸಿ ಸಂಖ್ಯೆ 78/2023**

ಫ್ರಾಸಾಃ 13
ಚಾಸಾಃ 23

ಸಾಕ್ಷಿದಾರರ ಹೆಸರು : ಗೋವಿಂದರಾಜು ಹೆಚ್.ಸಿ

ತಂದೆಯ ಹೆಸರು : ಚಿಕ್ಕದಾಸಯ್ಯ

ವಯಸ್ಸು : 59 ವರ್ಷ

ವೃತ್ತಿ : ಪಿ.ಎಸ್.ಐ., ಸೈಬರ್‌ಕ್ರೈಮ್ ಮಡಿಕೇರಿ,

ವಾಸ : ಮಡಿಕೇರಿ.

ಸಾಕ್ಷಿಯನ್ನು ದಿನಾಂಕ **02-07-2025** ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಖ್ಯವಿಚಾರಣೆಃ ವಿಷೇಶ ಸರ್ಕಾರಿ ಅಭಿಯೋಜಕರಿಂದಃ

1. ನಾನು ಮಾರ್ಚ್ 2022 ರಿಂದ ಏಪ್ರಿಲ್ 2025 ರವರೆಗೆ ಶನಿವಾರಸಂತೆ ಪೊಲೀಸ್ ಠಾಣೆಯಲ್ಲಿ ಪಿಎಸ್‌ಐ ಆಗಿ ಕರ್ತವ್ಯ ನಿರ್ವಹಿಸಿದ್ದೆ.

2. ದಿನಾಂಕ 22-07-2022 ರಂದು ಸಮಯ ರಾತ್ರಿ 10.00 ಗಂಟೆಗೆ ಚಾಸಾ-1 ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿ ಠಾಣಾ ಮೊಕದಮ್ಮೆ ಸಂಖ್ಯೆ 58/2022 ರಂತೆ ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿ ಪ್ರಥಮ ವರ್ತಮಾನ ವರದಿಯನ್ನು ಮೇಲಾಧಿಕಾರಿಗಳಿಗೆ ಮತ್ತು ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟೆನು. ಈಗ ನಾನು ನೋಡುತ್ತಿರುವ ದೂರು ಚಾಸಾ-1 ರವರಿಂದ ಸ್ವೀಕರಿಸಿದ್ದ ದೂರು ಆಗಿದ್ದು, ಅದನ್ನು ನಿಪಿ-19 ಎಂದು ಗುರುತಿಸಲಾಯಿತು. ನಿಪಿ-19 ರಲ್ಲಿ ಸಾಕ್ಷಿ ಗುರುತಿಸಿದ ಸಾಕ್ಷಿಯ ಶರಾ ಮತ್ತು ಸಹಿಯನ್ನು ಒಟ್ಟಾಗಿ ನಿಪಿ-19(ಎ) ಎಂದು ಗುರುತಿಸಲಾಯಿತು. ನಿಪಿ-19 ರಲ್ಲಿರುವ ಎಡಗೈಯ ಹೆಬೆಟ್ಟು ಗುರುತು ಚಾಸಾ-1 ರವರದ್ದು ಆಗಿರುತ್ತದೆ. ಈಗ ನಾನು ನೋಡುತ್ತಿರುವ ಪ್ರಥಮ ವರ್ತಮಾನ ವರದಿ ನಾನು ತಯಾರಿಸಿದ ಪ್ರಥಮ ವರ್ತಮಾನ ವರದಿ ಆಗಿದ್ದು, ಅದನ್ನು ನಿಪಿ-20 ಎಂದು ಸಾಕ್ಷ್ಯ ಸಹಿಯನ್ನು ನಿಪಿ-20(ಎ) ಎಂದು ಗುರುತಿಸಲಾಯಿತು. ಮುಂದಿನ ತನಿಖೆಯ ಬಗ್ಗೆ ಕಡತವನ್ನು

ಚಾಸಾ-24 ರವರಿಗೆ ವರ್ಗಾಹಿಸಿರುತ್ತೇನೆ.

3. ಚಾಸಾ-24 ರವರಿಗೆ ವರ್ಗವಣೆ ಆದ ಕಾರಣ ದಿನಾಂಕ 13-06-2023 ರಂದು ಈ ಪ್ರಕರಣದ ಕಡತವನ್ನು ಚಾಸಾ-24 ರವರಿಂದ ಕಡತವನ್ನು ಸ್ವೀಕರಿಸಿ ತನಿಖೆಯನ್ನು ಮುಂದುವರೆಸಿದೆನು. ಅದೇ ದಿನ 1 ನೇ ಆರೋಪಿಯನ್ನು ಪತ್ತೆಮಾಡಲು ನೇಮಿಸಲಾದ ಚಾಸಾ-20, 21 ಮತ್ತು 22 ರವರು ಬೆಳಗ್ಗೆ 6.30 ಗಂಟೆಗೆ ಶನಿವಾರಸಂತೆ ಹಂಡ್ಲಿ ಗ್ರಾಮದ ಬಸ್ ಸ್ಟಾಂಡ್ ಬಳಿ 1 ನೇ ಆರೋಪಿಯನ್ನು ಹಿಡಿದು ನನ್ನ ಮುಂದೆ ಬೆಳಗ್ಗೆ 7.35 ಗಂಟೆಗೆ ಹಾಜರು ಪಡಿಸಿದ್ದರು. ಆಗ ನಾನು 1 ನೇ ಆರೋಪಿಯನ್ನು ದಸ್ತಗಿರಿ ಮಾಡಿ ಆತನ ಸ್ವ-ಇಚ್ಛಾ ಹೇಳಿಕೆಯನ್ನು ಪಡೆದೆನು. 1 ನೇ ಆರೋಪಿಯು ತನ್ನ ಸ್ವ-ಇಚ್ಛಾ ಹೇಳಿಕೆಯಲ್ಲಿ ತನ್ನ ಜೊತೆ ಬಂದಲ್ಲಿ ಹಣವನ್ನು ಇಟ್ಟಿರುವ ಜಾಗವನ್ನು ತೋರಿಸಿಕೊಡುತ್ತೇನೆ ಎಂದು ಹೇಳಿರುತ್ತಾನೆ. ಸಾಕ್ಷಿ ಗುರುತಿಸಿದ 1 ನೇ ಆರೋಪಿಯ ಸ್ವ-ಇಚ್ಛಾ ಹೇಳಿಕೆಯ ಸದರಿ ನಿರ್ದಿಷ್ಟ ಭಾಗವನ್ನು ನಿಪಿ-21 ಎಂದು ನಿಪಿ-21 ರಲ್ಲಿ ಸಾಕ್ಷಿ ಗುರುತಿಸಿದ ಸಾಕ್ಷಿಯ ಸಹಿಯನ್ನು ನಿಪಿ-21(ಎ) ಎಂದು, ನಿಪಿ-21 ರಲ್ಲಿ ಸಾಕ್ಷಿ ಗುರುತಿಸಿದ ಆರೋಪಿಯ ಸಹಿಯನ್ನು ನಿಪಿ-21(ಬಿ) ಎಂದು ಗುರುತಿಸಲಾಯಿತು. ನಂತರ ನಾನು ಪಂಚರಾದ ಫ್ರಾಸಾ-8 ಮತ್ತು ಚಾಸಾ-10 ರವರನ್ನು ಠಾಣೆಗೆ ಬರಮಾಡಿಕೊಂಡು ನಂತರ ಇಲಾಖಾ ಜೀಪಿನಲ್ಲಿ ನಾನು ಸಿಬ್ಬಂಧಿಗಳು , ಪಂಚರು 1 ನೇ ಆರೋಪಿ ದಾರಿ ತೋರಿಸಿದ ಮೇರೆಗೆ ಕಣಗಾಲು ಗ್ರಾಮದಲ್ಲಿರುವ 1 ನೇ ಆರೋಪಿಯ ಮನೆಯ ಬಳಿ ಹೋಗಿದ್ದು, ಆರೋಪಿಯು ಜೀಪಿನಿಂದ ಇಳಿದು ತಾನೇ ಮುಂದಾಗಿ ನಮ್ಮನ್ನು ಆತನ ಮನೆಯ ಮಲಗುವ ಕೋಣೆಗೆ ಕರೆದುಕೊಂಡು ಹೋಗಿ ಅಲ್ಲಿ ಇದ್ದ ಮರದ ಬೀರುವಿನಲ್ಲಿ ಇಟ್ಟಿದ್ದ ರೂ.1,200/-ಗಳನ್ನು ಹಾಜರು ಪಡಿಸಿದ್ದು, ಅವುಗಳನ್ನು ಪಂಚರಾದ ಫ್ರಾಸಾ-8 ಹಾಗೂ ಚಾಸಾ-10 ರವರ ಸಮಕ್ಷಮ ಬೆಳಗ್ಗೆ 11.00 ಗಂಟೆಯಿಂದ ಮಧ್ಯಾಹ್ನ 12.00 ಗಂಟೆಯವರೆಗೆ ನಿಪಿ-8 ರಂತೆ ಪಂಚನಾಮ ಕ್ರಮವನ್ನು ಜರುಗಿಸಿ ಹಣವನ್ನು ವಶಕ್ಕೆ ಪಡದೆನು. ನಿಪಿ-8 ರಲ್ಲಿ ಸಾಕ್ಷಿ ಗುರುತಿಸಿದ ಸಾಕ್ಷಿಯ ಸಹಿಯನ್ನು ನಿಪಿ-8(ಬಿ) ಎಂದು ಗುರುತಿಸಲಾಯಿತು. ನಿಪಿ-8 ರ ಸಮಯದಲ್ಲಿ ನಿಪಿ-9 ರಂತೆ ಫೋಟೊಗಳನ್ನು ತೆಗೆಯಲಾಗಿತ್ತು. 1 ನೇ ಆರೋಪಿಯು ತಾನು ಹಣವನ್ನು

ತೆಗೆದುಕೊಂಡ ಜಾಗವನ್ನು ತೋರಿಸುವುದಾಗಿ ಹೇಳಿ ನಮ್ಮನ್ನು ನಾಕಲಗೂಡು ಗ್ರಾಮಕ್ಕೆ ಕರೆದುಕೊಂಡು ಹೋಗಿದ್ದು, ಅಲ್ಲಿ 1 ನೇ ಆರೋಪಿಯು ಫ್ರಾಸಾ-4 ವಾಸ ಇರುವ ಮನೆಯನ್ನು ತೋರಿಸಿಕೊಟ್ಟಿದ್ದು, ಫ್ರಾಸಾ-4 ರವರು ಮನೆಯ ಬಾಗಿಲನ್ನು ತೆರೆದ ನಂತರ 1 ನೇ ಆರೋಪಿಯು ಸದರಿ ಮನೆಯ ಒಳಗಡೆ ಜಾಗವನ್ನು ತೋರಿಸಿ ಅದೇ ಸ್ಥಳದಲ್ಲಿ 1 ನೇ ಆರೋಪಿಯ ಫ್ರಾಸಾ-4 ರವರ ಜೇಬಿನಿಂದ ಹಣವನ್ನು ತೆಗೆದುಕೊಂಡ ಸ್ಥಳ ಇದೇ ಎಂದು ತೋರಿಸಿದ ಮೇರೆಗೆ ಪಂಚರಾದ ಫ್ರಾಸಾ-8 ಮತ್ತು ಚಾಸಾ-10 ರವರ ಸಮಕ್ಷಮ ಮಧ್ಯಾಹ್ನ 12.15 ಗಂಟೆಯಿಂದ 1.15 ಗಂಟೆಯವರೆಗೆ ನಿಪಿ-10 ರಂತೆ ಪಂಚನಾಮ ಕ್ರಮವನ್ನು ಜರುಗಿಸಿ ನಿಪಿ-11 ರಂತೆ ಭಾವ ಚಿತ್ರ ತೆಗೆಯಲಾಯಿತು. ನಿಪಿ-10 ರಲ್ಲಿ ಸಾಕ್ಷಿ ಗುರುತಿಸಿದ ಸಾಕ್ಷಿಯ ಸಹಿಯನ್ನು ನಿಪಿ-10(ಬಿ) ಎಂದು ಗುರುತಿಸಲಾಯಿತು.

ಈಗ ಮಧ್ಯಾಹ್ನ ವಿಶ್ರಾಂತ ಸಮಯ ಆದಕಾರಣ ಸಾಕ್ಷಿಯ ಮುಂದುವರೆದ ಮುಖ್ಯವಿಚಾರಣೆಯನ್ನುಮಧ್ಯಾಹ್ನ **2.45** ಗಂಟೆಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.
ಸಹಿ/-xxx
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು-ಮಡಿಕೇರಿ

ಸಾಕ್ಷಿಯನ್ನು ಪುನಃ ಮಧ್ಯಾಹ್ನ **3:10** ಗಂಟೆಗೆ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಮುಖ್ಯವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದ:

4. ನಂತರ 1 ನೇ ಆರೋಪಿಯ ಜೊತೆ ಠಾಣೆಗೆ ಹಿಂತಿರುಗಿ ಅಮಾನತ್ತು ಪಡಿಸಿಕೊಂಡ ಸ್ವತ್ತುಗಳನ್ನು ಸ್ವತ್ತು ಪಟ್ಟಿಯಲ್ಲಿ ಅಳವಡಿಸಿ ನ್ಯಾಯಾಲಯಕ್ಕೆ ಸಿಬ್ಬಂಧಿಯ ಮೂಲಕ ಕಳುಹಿಸಿಕೊಟ್ಟೆನು. 1 ನೇ ಆರೋಪಿಯನ್ನು ರಿಮ್ಯಾಂಡ್ ಅರ್ಜಿಯೆಂದಿಗೆ ಸಿಬ್ಬಂಧಿಯ ಮೂಲಕ ಸಂಬಂಧಿಸಿದ ನ್ಯಾಯಾಲಯಕ್ಕೆ ಹಾಜರು ಪಡಿಸಿದೆನು. ಚಾಸಾ-21 ರವರು ಮಹಜರ್ ಗಳ ಸಮಯದಲ್ಲಿ ಫೊಟೋಗಳನ್ನು ತೆಗೆದಿದ್ದು, ಆ ಬಗ್ಗೆ ಚಾಸಾ-21 ರವರು ಭಾರತೀಯ ಸಾಕ್ಷ್ಯ ಅಧಿನಿಯಮ ಕಾಲಂ 65(ಬಿ) ಅಡಿ ನೀಡಿದ್ದ ಧೃಡೀಕರಣ ಪತ್ರವನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡೆನು. ಅದನ್ನು ಈಗ ನಾನು ನೋಡುತ್ತಿದ್ದು, ಸಾಕ್ಷಿ ಗುರುತಿಸಿದ ಭಾರತೀಯ

ಸಾಕ್ಷ್ಯ ಅಧಿನಿಯಮ ಕಾಲಂ 65(ಬಿ) ಅಡಿ ನೀಡಿದ್ದ ಧೃಡೀಕರಣ ಪತ್ರವನ್ನು ನಿಪಿ-22 ಎಂದು ಸಾಕ್ಷಿಯ ಸಹಿಯನ್ನು ನಿಪಿ-22(ಎ) ಎಂದು ಗುರುತಿಸಲಾಯಿತು. ನಂತರ ಸಾಕ್ಷಿದಾರರಾದ ಚಾಸಾ-9, 10, 20, 21 ಮತ್ತು 22 ರವರ ಹೇಳಿಕೆಗಳನ್ನು ಅದೇ ದಿನ ಪಡೆದೆನು. ನಂತರ ಈ ಪ್ರಕರಣದ ಕಡತವನ್ನು ಠಾಣಾಧಿಕಾರಿಗಳಿಗೆ ಹಸ್ತಾಂತರಿಸಿದೆನು. ಈಗ ನಾನು ನ್ಯಾಯಾಲಯದ ಮುಂದೆ ನೋಡುತ್ತಿರುವ ಮು.ಮಾ 2 ನ್ನು ನಾನು ನಿಪಿ-8 ಪಂಚನಾಮೆಯ ಅಡಿ ವಶಕ್ಕೆ ಪಡೆದಿದ್ದೆ. 1 ನೇ ಆರೋಪಿಯನ್ನು ನಾನು ನೋಡಿದರೆ ಗುರುತಿಸುತ್ತೇನೆ. 1 ನೇ ಆರೋಪಿ ಈ ದಿನ ಗೈರು ಹಾಜರಿದ್ದು, ಆತನ ಗುರುತಿಸುವಿಕೆಯ ಬಗ್ಗೆ ತಕರಾರು ಇಲ್ಲ ಎಂದು 1 ನೇ ಆರೋಪಿಯ ಪರ ವಕೀಲರು ನಿವೇದಿಸಿರುತ್ತಾರೆ.

ಪಾಟೀಸವಾಲು- **6** ಮತ್ತು **7** ನೇ ಆರೋಪಿತರ ಪರ ಶ್ರೀ ಇ.ಎ.ಟಿ ವಕೀಲರಿಂದಃ

5. ದಿನಾಂಕ 18-07-2022 ರಿಂದ 22-07-2022 ರವರೆಗೆ ಈ ಪ್ರಕರಣಕ್ಕೆ ಸಂಬಂಧ ಪಟ್ಟಂತೆ ಯಾವುದೇ ಆಸ್ಪತ್ರೆಯಿಂದ ನನಗೆ MLC intimation ಬಂದಿರಲಿಲ್ಲ. ಚಾಸಾ-1 ರವರ ಜೊತೆ ದೂರು ನೀಡುವಾಗ ಪ್ರಾಸಾ-4 ರವರು ಸಹ ಠಾಣೆಗೆ ಬಂದಿದ್ದರು. ಚಾಸಾ-1 ರವರ ಠಾಣೆಗೆ ಬರುವಾಗಲೇ ದೂರನ್ನು ಬರೆದು ತಂದಿದ್ದರು. ನಿಪಿ-19 ದೂರನ್ನು ಯಾರು ಬರೆದಿದ್ದಾರೆ ಎಂದು ನಾನು ವಿಚಾರಣೆ ಮಾಡಿರಲಿಲ್ಲ. ಚಾಸಾ-1 ರವರಿಗೆ ಕನ್ನಡ ಭಾಷೆ ಬರೆಯಲು ಬರುತ್ತಿರಲಿಲ್ಲ ಆದರೆ ಓದಲು ಬರುತ್ತಿತ್ತು.

6. ದಿನಾಂಕ 22-07-2022 ರಂದು ಸಮಯ ರಾತ್ರಿ 10.00 ಗಂಟೆಗೆ ಚಾಸಾ-1 ಠಾಣೆಗೆ ಹಾಜರಾಗಿ ಲಿಖಿತ ದೂರು ನೀಡಿದ್ದರು ಎಂದು ನಾನು ನನ್ನ ಮುಖ್ಯವಿಚಾರಣೆಯಲ್ಲಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

7. ದಿನಾಂಕ 13-06-2023 ರಂದು 1 ನೇ ಆರೋಪಿಯನ್ನು ಪತ್ತೆಮಾಡಲು ನೇಮಿಸಲಾದ ಚಾಸಾ-20, 21 ಮತ್ತು 22 ರವರು ಬೆಳಗ್ಗೆ 6.30 ಗಂಟೆಗೆ ಶನಿವಾರಸಂತೆ ಹಂಡ್ಲಿ ಗ್ರಾಮದ ಬಸ್ ಸ್ಟಾಂಡ್ ಬಳಿ 1 ನೇ ಆರೋಪಿಯನ್ನು ಹಿಡಿದು ನನ್ನ ಮುಂದೆ ಬೆಳಗ್ಗೆ 7.35 ಗಂಟೆಗೆ ಹಾಜರು ಪಡಿಸಿದ್ದರು, ಆಗ ನಾನು 1 ನೇ ಆರೋಪಿಯನ್ನು ದಸ್ತಗಿರಿ ಮಾಡಿ ಆತನ ಸ್ವ-ಇಚ್ಛಾ ಹೇಳಿಕೆಯನ್ನು

ಪಡೆದೆನು ಎಂದು ನಾನು ನನ್ನ ಮುಖ್ಯವಿಚಾರಣೆಯಲ್ಲಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

8. 1 ನೇ ಆರೋಪಿಯು ತನ್ನ ಸ್ವ-ಇಚ್ಛಾ ಹೇಳಿಕೆಯಲ್ಲಿ ತನ್ನ ಜೊತೆ ಬಂದಲ್ಲಿ ಹಣವನ್ನು ಇಟ್ಟಿರುವ ಜಾಗವನ್ನು ತೋರಿಸಿಕೊಡುತ್ತೇನೆ ಎಂದು ಹೇಳಿರುತ್ತಾನೆ ಎಂದು ನಾನು ನನ್ನ ಮುಖ್ಯವಿಚಾರಣೆಯಲ್ಲಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. 1 ನೇ ಆರೋಪಿ ನಿಪಿ-21 ರಂತೆ ನನ್ನ ಮುಂದೆ ಯಾವುದೇ ಸ್ವ-ಇಚ್ಛಾ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ನಾನು ಪಂಚರಾದ ಫ್ರಾಸಾ-8 ಮತ್ತು ಚಾಸಾ-10 ರವರನ್ನು ಠಾಣೆಗೆ ಬರಮಾಡಿಕೊಂಡು ನಂತರ ಇಲಾಖಾ ಜೀಪಿನಲ್ಲಿ ನಾನು ಸಿಬ್ಬಂಧಿಗಳು , ಪಂಚರು 1 ನೇ ಆರೋಪಿ ದಾರಿ ತೋರಿಸಿದ ಮೇರೆಗೆ ಕಣಗಾಲು ಗ್ರಾಮದಲ್ಲಿರುವ 1 ನೇ ಆರೋಪಿಯ ಮನೆಯ ಬಳಿ ಹೋಗಿದ್ದು, ಆರೋಪಿಯು ಜೀಪಿನಿಂದ ಇಳಿದು ತಾನೇ ಮುಂದಾಗಿ ನಮ್ಮನ್ನು ಆತನ ಮನೆಯ ಮಲಗುವ ಕೋಣೆಗೆ ಕರೆದುಕೊಂಡು ಹೋಗಿ ಅಲ್ಲಿ ಇದ್ದ ಮರದ ಬೀರುವಿನಲ್ಲಿ ಇಟ್ಟಿದ್ದ ರೂ.1,200/- ಗಳನ್ನು ಹಾಜರು ಪಡಿಸಿದ್ದು, ಅವುಗಳನ್ನು ಪಂಚರಾದ ಫ್ರಾಸಾ-8 ಹಾಗೂ ಚಾಸಾ-10 ರವರ ಸಮಕ್ಷಮ ಬೆಳಗ್ಗೆ 11.00 ಗಂಟೆಯಿಂದ ಮಧ್ಯಾಹ್ನ 12.00 ಗಂಟೆಯವರೆಗೆ ನಿಪಿ-8 ರಂತೆ ಪಂಚನಾಮ ಕ್ರಮವನ್ನು ಜರುಗಿಸಿ ಹಣವನ್ನು ವಶಕ್ಕೆ ಪಡದೆನು ಎಂದು ನಾನು ನನ್ನ ಮುಖ್ಯವಿಚಾರಣೆಯಲ್ಲಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

9. 1 ನೇ ಆರೋಪಿಯು ತಾನು ಹಣವನ್ನು ತೆಗೆದುಕೊಂಡ ಜಾಗವನ್ನು ತೋರಿಸುವುದಾಗಿ ಹೇಳಿ ನಮ್ಮನ್ನು ನಾಕಲಗೂಡು ಗ್ರಾಮಕ್ಕೆ ಕರೆದುಕೊಂಡು ಹೋಗಿದ್ದು, ಅಲ್ಲಿ 1 ನೇ ಆರೋಪಿಯು ಫ್ರಾಸಾ-4 ವಾಸ ಇರುವ ಮನೆಯನ್ನು ತೋರಿಸಿಕೊಟ್ಟಿದ್ದು, ಫ್ರಾಸಾ-4 ರವರು ಮನೆಯ ಬಾಗಿಲನ್ನು ತೆರೆದ ನಂತರ 1 ನೇ ಆರೋಪಿಯು ಸದರಿ ಮನೆಯ ಒಳಗಡೆ ಜಾಗವನ್ನು ತೋರಿಸಿ ಅದೇ ಸ್ಥಳದಲ್ಲಿ 1 ನೇ ಆರೋಪಿಯ ಫ್ರಾಸಾ-4 ರವರ ಜೇಬಿನಿಂದ ಹಣವನ್ನು ತೆಗೆದುಕೊಂಡ ಸ್ಥಳ ಇದೇ ಎಂದು ತೋರಿಸಿದ ಮೇರೆಗೆ ಪಂಚರಾದ ಫ್ರಾಸಾ-8 ಮತ್ತು ಚಾಸಾ-10 ರವರ ಸಮಕ್ಷಮ ಮಧ್ಯಾಹ್ನ 12.15 ಗಂಟೆಯಿಂದ 1.15 ಗಂಟೆಯವರೆಗೆ ನಿಪಿ-10 ರಂತೆ ಪಂಚನಾಮ

ಕ್ರಮವನ್ನು ಜರುಗಿಸಿ ನಿಪಿ-11 ರಂತೆ ಭಾವ ಚಿತ್ರ ತೆಗೆಯಲಾಯಿತು ಎಂದು ನಾನು ನನ್ನ ಮುಖ್ಯವಿಚಾರಣೆಯಲ್ಲಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

10. ನಾನು ಪಿರ್ಯಾದನ್ನು ಸ್ವೀಕರಿಸಿದ ನಂತರ ಘಟನಾ ಸ್ಥಳಕ್ಕೆ ಹೋಗಿರಲಿಲ್ಲ. ಚಾಸಾ-1 ಮತ್ತು 2 ರವರ ಮೇಲೆ 2 ನೇ ಆರೋಪಿತರು ತನಗೂ ಮತ್ತು 1 ಮತ್ತು 3 ನೇ ಆರೋಪಿತರಿಗೆ ಜಾತಿ ನಿಂದನೆ ಮಾಡಿದ ಬಗ್ಗೆ ದೂರನ್ನು ಸಲ್ಲಿಸಿದ್ದರು ಎಂದರೆ ಸರಿ. ಅದು ಕೂಡ ವಿಚಾರಣೆಗೆ ಬಾಕಿ ಇರುತ್ತದೆ ಎಂದರೆ ಸರಿ.

ಪಾಟೀಸವಾಲು**- 1** ರಿಂದ **4** ನೇ ಆರೋಪಿತರ ಪರ ಶ್ರೀ ಸಿ.ಎಸ್.ಪಿ. ವಕೀಲರ ಪರವಾಗಿ ಶ್ರೀಮತಿ ಕೆ.ಎನ್.ಎನ್ ವಕೀಲರು ಮತ್ತು **5** ನೇ ಆರೋಪಿ ಪರ ಶ್ರೀ ಪಿ.ಕೆ.ಎಮ್ ವಕೀಲರು ಈ ಮೇಲಿನ ಪಾಟೀಸವಾಲನ್ನು ಅಳವಡಿಸಿಕೊಳ್ಳುವುದಾಗಿ ತಿಳಿಸಿರುತ್ತಾರೆ

<u>ಮರುವಿಚಾರಣೆಃ</u> ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-xxx

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು-ಮಡಿಕೇರಿ